
## ಕಳೆದ ಸಂಚಿಕೆಯಲ್ಲಿ

ರಿತಿಕ್ ಬಿಟ್ಟು ಬಂದ ಮೇಲೆ ಸುಗಂಧಾಗೆ ಖುಷಭ್ ಪರಿಚಯವಾಗುತ್ತದೆ. ಇಬ್ಬರೂ ಖಜುರಾಹೊಗೆ ಹೋಗುತ್ತಾರೆ. ಅಲ್ಲಿ ಹೋಟೆಲ್‌ನಲ್ಲಿ ಉಳಿದುಕೊಂಡು ಖಜುರಾಹೊ ದರ್ಶನ ಮಾಡುತ್ತಾರೆ. ಮಂದಿರದ ಗೋಡೆಯ ಮೇಲೆ ಕಾಮಕಲೆಯ ಚಿತ್ರ ಕೆತ್ತಲಾಗಿತ್ತು. ಇದನ್ನು ದೇಶವಿದೇಶಗಳಿಂದ ಬಂದ ಯಾತ್ರಿಕರು ಫೋಟೊ ತೆಗೆದುಕೊಳ್ಳುತ್ತಿದ್ದರು. ಖುಷಭ್ ಕೂಡ ಮೊಬೈಲ್‌ನಲ್ಲಿ ಚಿತ್ರ ತೆಗೆದುಕೊಳ್ಳುತ್ತಾರೆ. ಹೋಟೆಲ್ ರೂಮ್‌ಗೆ ಬಂದು ಇಬ್ಬರೂ ಕಾಮಸೂತ್ರದ ಬುಕ್‌ಲೆಟ್‌ನಲ್ಲಿರುವ ಚಿತ್ರಗಳನ್ನು ನೋಡುತ್ತಾರೆ. ಆಗ ಸುಗಂಧಾಗೆ ರಿತಿಕ್‌ನ ನೆನಪು ಬರುತ್ತದೆ. ಖಜುರಾಹೋದಿಂದ ವಾಪಸ್ ಕಾರಿನಲ್ಲಿ ಬರುವಾಗ ಖುಷಭ್, 'ನೀವು ನನ್ನ ಜಾಗದಲ್ಲಿ ಶೀಘ್ರವೇ ಬೇರೊಬ್ಬ ಪುರುಷನನ್ನು ಹುಡುಕಿಕೊಳ್ಳೀರ' ಎಂದು ಹೇಳುತ್ತಾರೆ. ಆಗ ಸುಗಂಧಾಗೆ ಕೋಪ ಬರುತ್ತದೆ. ಅವರನ್ನು ಕಾರಿನಿಂದ ಇಳಿಸಿ ಒಬ್ಬರೇ ವಾಪಸಾಗುತ್ತಾಳೆ. ಖುಷಭ್‌ನನ್ನು ತೊರೆದ ಮೇಲೆ ಕೆಲಸಕ್ಕೆ ಮರಳುತ್ತಾಳೆ. ಬರವಣಿಗೆಯಲ್ಲಿ ತೊಡಗಿಸಿಕೊಳ್ಳುತ್ತಾಳೆ.



'ಆಗಲಿ, ನಿಮ್ಮಾಜ್ಞೆಯನ್ನು ಪಾಲಿಸುವುದು ನನ್ನ ಕರ್ತವ್ಯ. ಈಗ ರಾತ್ರಿಯಾಗಿದೆ. ನಾಳೆ ಪ್ರಾತಃಕಾಲ ನಿಮ್ಮನ್ನು ಆ ವೇಶ್ಯೆಯ ಮನೆಗೆ ಕರೆದುಕೊಂಡು ಹೋಗುತ್ತೇನೆ' ಎಂದಳು ಶಾಂಡಿಲಿ. ಹೀಗೆ ಹೇಳುವಾಗ ಅವಳ ಮನಸ್ಸಿನಲ್ಲಿ, ಪ್ರಾತಃಕಾಲದವರೆಗೆ ಪತಿಯ ಯೋಚನೆ ಬದಲಾಗಬಹುದು, ಅವರು ವೇಶ್ಯೆಯ ಮನೆಗೆ ಹೋಗುವ ಹಟವನ್ನು ಬಿಡಬಹುದು ಎಂಬ ಯೋಚನೆ ಬಂತು. ಆದರೆ ಕೌಶಿಕ ತನ್ನ ಹಟವನ್ನು ಹೇಗೆ ಬಿಡುತ್ತಾನೆ?

'ವೇಶ್ಯೆಯ ಮನೆಗೆ ಹೋಗಲು ಹಗಲು ಮತ್ತು ರಾತ್ರಿಯ ಬಗ್ಗೆ ಯೋಚಿಸಲಾಗುವುದಿಲ್ಲ. ನೀನೀಗಲೇ ನನ್ನನ್ನು ಅವಳ ಮನೆಗೆ ಕರೆದುಕೊಂಡು ಹೋಗು', ಕೌಶಿಕ ಆಜ್ಞಾಪಿಸಿದ.

'ಆದ್ರೆ ಸ್ವಾಮಿ, ಈ ಅಂಧಕಾರದ ರಾತ್ರಿಯಲ್ಲಿ ಮಾರ್ಗ ತಿಳಿಯುವುದಿಲ್ಲ', ಶಾಂಡಿಲಿ, ಖುಷಿಗೆ ತಿಳಿಯಪಡಿಸಲು ಬಯಸಿದಳು.

'ಸರಿ, ಈಗ ನನಗೆ ಅರ್ಥವಾಯ್ತು. ನಿನ್ನ ಪಾತಿವ್ರತ್ಯದಲ್ಲಿ ದೋಷವಿದೆ, ಅದಕ್ಕೇ ನಾನಾ ವಿಧದ ನೆಪವನ್ನು ಹೇಳ್ತಿದ್ದೀಯ, ನೀನು ಪತಿ ಸೇವೆ ಮಾಡಲು ಹಿಂಜರಿಯುತ್ತಿದ್ದೀಯ' ಕೌಶಿಕ ಅಪವಾದ ಹೊರಿಸಿದ. ಪತಿ ಯಾವುದಕ್ಕೂ ಒಪ್ಪುವುದಿಲ್ಲವೆಂದು ಶಾಂಡಿಲಿ ಅರ್ಥ ಮಾಡಿಕೊಂಡಳು. ಅವಳು ಪತಿಯನ್ನು ಹೆಗಲ ಮೇಲೆ ಕೂರಿಸಿಕೊಂಡು, ವೇಶ್ಯೆಯ ಮನೆಗೆ ಹೊರಟಳು. ಕತ್ತಲೆಯಾದ್ದರಿಂದ ಅವಳಿಗೆ ಮಾರ್ಗ ತಿಳಿಯುತ್ತಿರಲಿಲ್ಲ. ಅವಳು ತಪ್ಪಿ ಖುಷಿ ಅಣಿಮಾಂಡವ್ಯರು ತಪಸ್ಸು ಮಾಡುತ್ತಿದ್ದಲ್ಲಿಗೆ ಹೋದಳು. ಖುಷಿಗಳ ಸಮೀಪದಿಂದ ಹಾದು ಹೋಗುವಾಗ ಅವಳ ಕಾಲಿಗೆ ಮುಳ್ಳುಗಳು ಚುಚ್ಚಿದವು, ಹೀಗಾಗಿ ಅವಳು ಓಲಾಡಿದಳು. ಅವಳು ಓಲಾಡಿದ್ದರಿಂದ ಕೌಶಿಕನ ಕಾಲು ಖುಷಿ ಅಣಿಮಾಂಡವ್ಯರಿಗೆ ಬಡಿಯಿತು. ಇದರಿಂದ ಅವರ ಧ್ಯಾನಕ್ಕೆ ಭಂಗವುಂಟಾಯಿತು. ಅವರು ಸಿಟ್ಟಿನಿಂದ ಬೆಂಕಿಯಾದರು.

'ಅರೇ ನರಾಧಮ! ಮೊದಲನೆಯದಾಗಿ ನಿನ್ನ ಹೆಂಡತಿಯ ಹೆಗಲ ಮೇಲೆ ಕೂತು ಹೋಗುತ್ತಿದ್ದೀಯ, ಎರಡನೆಯದಾಗಿ ನನಗೆ ಒದೆಯುತ್ತಿದ್ದೀಯ? ನಾನು ನಿನಗೆ ಶಾಪವನ್ನು ಕೊಡುತ್ತೇನೆ; ಸೂರ್ಯೋದಯವಾಗುತ್ತಲೇ ನೀನು ಇಹಲೋಕವನ್ನು ತ್ಯಜಿಸುವೆ', ಖುಷಿ ಅಣಿಮಾಂಡವ್ಯರು ಕ್ರೋಧಾವೇಶದಲ್ಲಿ ಕೌಶಿಕನಿಗೆ ಶಾಪವನ್ನು ಕೊಟ್ಟರು.

'ಖುಷಿಗಳೇ! ಇದೇನು ಮಾಡಿದಿರಿ? ಇವರು ಎಷ್ಟಾದರೂ, ಹೇಗಿದ್ದರೂ ನನ್ನ ಪತಿಯಾಗಿದ್ದಾರೆ. ತಿಳಿಯದೆಯೇ ಇದು ಸಂಭವಿಸಿತು, ಇವರಿಗೇಕೆ ನೀವು ಸಾವಿನ ಶಾಪವನ್ನು ಕೊಟ್ಟಿರಿ?' ಶಾಂಡಿಲಿ ಬಿಕ್ಕಳಿಸಿದಳು.

'ಪುತ್ರಿ, ಈಗೇನೂ ಆಗದು. ನನ್ನ ಶಾಪ ವ್ಯರ್ಥವಾಗುವುದಿಲ್ಲ. ಇನ್ನು ನಿನ್ನ ಪತಿಯ ಸಾವು ನಿಶ್ಚಿತ. ಇಂಥ ನರಾಧಮ ಪತಿಯಿಂದ ನಿನಗೆ ಬಿಡುಗಡೆಯಾಗುವುದೆಂದು ಯೋಚಿಸಿ ನೀನು ಸಂತೋಷ ಪಡಬೇಕು', ಖುಷಿ ಅಣಿಮಾಂಡವ್ಯರು ಶಾಂಡಿಲಿಗೆ ಹೇಳಿದರು.

'ಇಲ್ಲ ಖುಷಿವರ್ಯರೇ! ನಾನು ನನ್ನ ಪತಿಯಿಂದ ಬಿಡುಗಡೆಯಾಗುವ ಇಚ್ಛೆಯನ್ನು ಹೊಂದಿಲ್ಲ, ಹೀಗಿರುವಾಗ ನನ್ನ ಪತಿಯಿಂದ ನನ್ನನ್ನು ಬೇರ್ಪಡಿಸಲು ನೀವ್ಯಾರು?' ಶಾಂಡಿಲಿ ದುಃಖ ಮತ್ತು ಸಿಟ್ಟಿನಿಂದ ಹೇಳಿದಳು. ನಂತರ ಅವಳು ಘೋಷಣೆ ಮಾಡಿದಳು, ಒಂದು ವೇಳೆ ನನ್ನ ಸತೀತ್ವದಲ್ಲಿ ಶಕ್ತಿ ಇದ್ದರೆ, ಈ ರಾತ್ರಿಯೇ ಮುಗಿಯಬಾರದು, ಸೂರ್ಯೋದಯವೆಂದೂ ಆಗಲೇ ಬಾರದು. ಆಗ ನಿಮ್ಮ ಶಾಪ ನನ್ನ ಪತಿಗೆ ಎಂದೂ ತಟ್ಟದು!

ಶಾಂಡಿಲಿಯ ಈ ಘೋಷಣೆಯನ್ನು ಕೇಳಿ ಮೂರೂ ಲೋಕಗಳಲ್ಲಿ ಹಾಹಾಕಾರ ಹಬ್ಬಿತು. ಸೂರ್ಯೋದಯವೇ ಆಗದಿದ್ದರೆ ಭೂಮಿಯಲ್ಲಿ ಜೀವನ ನಡೆಯುವುದಾದರೂ ಹೇಗೆ?

'ಈಗೇನು ಮಾಡುವುದು ಸೃಷ್ಟಿಕರ್ತ? ನಿನ್ನ ಮಾತನ್ನು ಹಿಂದಕ್ಕೆ ತೆಗೆದುಕೋ ಎಂದು ಶಾಂಡಿಲಿಯನ್ನು ಪ್ರಾರ್ಥಿಸುವುದೋ ಅಥವಾ ಖುಷಿ ಅಣಿಮಾಂಡವ್ಯರನ್ನು ಶಾಪ ಹಿಂದಕ್ಕೆ ತೆಗೆದುಕೊಳ್ಳಲು ಹೇಳುವುದೋ?' ದೇವತೆಗಳು ಬ್ರಹ್ಮನನ್ನು ಕೇಳಿದರು.

'ಇಲ್ಲ, ಈ ಎರಡೂ ಉಪಾಯಗಳು ಸಂಭವವಿಲ್ಲ. ಖುಷಿಯ ಶಾಪ ಮತ್ತು ಸತಿಯ ಮಾತು ಎರಡೂ ಮರಳಿ ಬರಲಾರವು. ಈಗ ಖುಷಿ ಅತ್ರಿಯವರ ಪತ್ನಿ ಅನಸೂಯಾ ನಮ್ಮನ್ನು ಈ ಸಂಕಟದಿಂದ ಪಾರು ಮಾಡಬಲ್ಲಳು. ಏಕೆಂದರೆ ಅವಳೇ ಅವನನ್ನು ಮತ್ತೆ ಬದುಕಿಸಲು ಸಾಧ್ಯ'. ಬ್ರಹ್ಮ ಸಂಕಟದಿಂದ ಪಾರಾಗುವ ಉಪಾಯವನ್ನು ಹೇಳಿದ.

ಆಗ ಎಲ್ಲಾ ದೇವತೆಗಳು ಸತಿ ಅನಸೂಯಾಳ ಬಳಿಗೆ ಹೋಗಿ, ಪೃಥ್ವಿ ಲೋಕದಲ್ಲಿ ಹರಡಿದ ಅಂಧಕಾರವನ್ನು ದೂರ ಮಾಡಲು ಪ್ರಾರ್ಥಿಸಿದರು. ಅನಸೂಯಾ ಒಪ್ಪಿದಳು.

'ಸತಿ ಶಾಂಡಿಲಿ, ಸೂರ್ಯನನ್ನು ಮುಕ್ತಗೊಳಿಸು, ಸೂರ್ಯನ ಪ್ರಕಾಶ ಮತ್ತು ಉಷ್ಣತೆ ಪೃಥ್ವಿಯನ್ನು ತಲುಪಲು ಬಿಡು. ಸೂರ್ಯೋದಯವಾಗುತ್ತಲೇ ನಿನ್ನ ಪತಿಯ ಸಾವು ಸಂಭವಿಸುತ್ತದೆ. ಅಂತೆಯೇ ನಾನು ಕೂಡಲೇ ಅವನನ್ನು ಮತ್ತೆ ಜೀವಂತಗೊಳಿಸುತ್ತೇನೆ', ಸತಿ ಅನಸೂಯಾ ಶಾಂಡಿಲಿಗೆ ತಿಳಿಯಪಡಿಸಿದಳು.

ಶಾಂಡಿಲಿ ಅನುಸೂಯಾಳ ಮಾತನ್ನು ಒಪ್ಪಿ, ಸೂರ್ಯನನ್ನು ಮುಕ್ತಗೊಳಿಸಿದಳು. ಸೂರ್ಯ ಉದಯಿಸುತ್ತಲೇ ಕೌಶಿಕನ ಪ್ರಾಣ ಹಾರಿ ಹೋಯಿತು, ಅವನ ಮೃತ ದೇಹ ಶಾಂಡಿಲಿಯ ಹೆಗಲಿನಿಂದ ಕೆಳಗೆ ನೆಲದ ಮೇಲೆ ಬಿತ್ತು. ಮರುಕ್ಷಣವೇ ಅನಸೂಯಾ ತನ್ನ ಸತೀತ್ವದ ಶಕ್ತಿಯಿಂದ ಕೌಶಿಕನನ್ನು ಪುನರ್ಜೀವಿತಗೊಳಿಸಿದಳು, ಅದರೊಂದಿಗೆ ಅವನ ಕುಷ್ಠ ರೋಗ ಸಹ ದೂರವಾಯಿತು. ಕೂಡಲೇ ಕೌಶಿಕ ಅನಸೂಯಾಳ ಪಾದಗಳ ಮೇಲೆ ಬಿದ್ದ. "ಎದ್ದೇಳು ಕೌಶಿಕ! ನೀನು ನಮಸ್ಕರಿಸಲೇ ಬೇಕೆಂದಿದ್ದರೆ, ನಿನ್ನ ಪತ್ನಿ ಶಾಂಡಿಲಿಗೆ ನಮಸ್ಕರಿಸು!. ಅವಳ ಸಮರ್ಪಣಾ ಭಾವನೆ ಮತ್ತು ಪಾತಿವ್ರತ್ಯವೇ ನಿನ್ನ ಪ್ರಾಣವನ್ನು ರಕ್ಷಿಸಿದೆ!" ಎಂದಳು ಅನಸೂಯಾ.

(ಸಶೇಷ)

